# ಮೂರು ಕವಿತೆ

■ ರಾಜಶೇಖರ ಕುಕ್ಕುಂದಾ,
ಬಾಗಲಕೋಟೆ
ಚಿತ್ರಗಳು: ಗಣೇಶ್ ಅರಳಿಕಟ್ಟಿ



## ನನ್ನ ಸೈಕಲ್ಲು

ಪೆಟ್ರೋಲ್ ಕುಡಿಯೋದಿಲ್ಲ
ಹೊಗೆ ಉಗುಳೋದಿಲ್ಲ

ಪೊಲೀಸ್ ಹಿಡಿಯೋದಿಲ್ಲ
ಲೈಸೆನ್ಸ್ ಕೇಳೋದಿಲ್ಲ

ಟ್ರಿನ್ ಟ್ರಿನ್ ಅನ್ನುತ್ತೆ
ಸರ್ರ್ ಸರ್ರ್ ಓಡುತ್ತೆ

ಗಾಳಿ ಕುಡ್ದೇ ಬದುಕುತ್ತೆ
ಊರೆಲ್ಲಾ ಸುತ್ತುತ್ತೆ

ಪೆಡಲ್ ತುಳ್ದ್ರೆ ಮುಂದಕ್ಕೆ
ರಸ್ತೆಯೆಲ್ಲಾ ಹಿಂದಕ್ಕೆ

ಯಾರೂ ಅಡ್ಡ ಬರ್ಬೇಡಿ
ಮೇಲೆ ಬಿದ್ರೆ ಬಯ್ಬೇಡಿ!



## ... ಒದರ್ತಾ ಇದ್ರೆ

ನಾಯಿ ಒದರ್ತಾ ಇದ್ರೆ
ಬೌ ಬೌ ಬೌ
ರೊಟ್ಟಿ ಬೇಕಾಗಿರುತ್ತೆ
ತಿನ್ಸಿ ತಿನ್ಸಿ ತಿನ್ಸಿ!

ಬೆಕ್ಕು ಒದರ್ತಾ ಇದ್ರೆ
ಮ್ಯಾಂವ್ ಮ್ಯಾಂವ್...
ಹಾಲು ಬೇಕಾಗಿರುತ್ತೆ
ಕುಡ್ಸಿ ಕುಡ್ಸಿ ಕುಡ್ಸಿ!

ಕಪ್ಪೆ ಒದರ್ತಾ ಇದ್ರೆ
ವಟರ್ ವಟರ್ ವಟರ್
ನೀರು ಬೇಕಾಗಿರುತ್ತೆ
ಕುಡ್ಸಿ ಕುಡ್ಸಿ ಕುಡ್ಸಿ!

ಅಪ್ಪ ಒದರ್ತಾ ಇದ್ರೆ
ಟರ್ ಟರ್ ಟರ್
ಅಮ್ಮ ಬೈದಿರ್ತಾಳೆ
ರಮ್ಸಿ ರಮ್ಸಿ ರಮ್ಸಿ!

## ಎಂಥ ವಿಚಿತ್ರ!

‘ಥಳಿ ಥಳಿ’ ಎಂದು
ನಡುಗುತಲಿತ್ತು
ವೂಲನ್ ಸ್ವೆಟರು!

‘ಸೆಕೆ ಸೆಕೆ’ ಎಂದು
ಬೆವರುತಲಿತ್ತು
ಫ್ರಿಡ್ಜಿನ ಕವರು!

‘ಉರಿ ಉರಿ’ ಎಂದು
ಗೋಳಿಡುತಿತ್ತು
ಮೆಣಸಿನಕಾಯಿ!

‘ಹುಳಿ ಹುಳಿ’ ಎಂದು
ಮುಖ ಕೆಡಿಸಿತ್ತು
ಮಾವಿನಕಾಯಿ!

‘ಬೌ ಬೌ’ ಎಂದು
ಬೌಗುಡುತಿತ್ತು
ಅಜ್ಜಿಯ ಬಾಯಿ!

‘ಕಣ್ ಕಣ್’ ಬಿಟ್ಟು
ನೋಡುತಲಿತ್ತು
ಬೀದಿಯ ನಾಯಿ!

